ಮುಂದುವರಿದು ಕೆಳಕಂಡ ಸರ್ಕಾರಿ ಆಸ್ಪತ್ರೆಗಳಲ್ಲಿ ಇ.ಸಿ.ಜಿ., ಕ್ಷ-ಕಿರಣ ತಂತ್ರಜ್ಞ, ಅಲ್ಟ್ರಾಸೌಂಡ್ ಮತ್ತು ಡಯಾಲಿಸಿಸ್ ಯಂತ್ರ ಇತ್ಯಾದಿ ಆಧುನಿಕ ಯಂತ್ರಗಳನ್ನು ಪೂರೈಸಲಾಗಿದೆ. ಒಟ್ಟಾರೆ ಉಪಕರಣಗಳಿಗೆ ಖರ್ಚು ಮಾಡಿದ ಮೊತ್ತದ ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಆಸ್ಪತ್ರೆಯ ವಿವರ	ಒಟ್ಟು ಮೊತ್ತ
1.	ಕೆ.ಸಿ. ಜನರಲ್ ಆಸ್ಪತ್ರೆ	17614460.00
2.	ಜಯನಗರ ಸಾರ್ವಜನಿಕ ಆಸ್ಪತ್ರೆ	6500000.00
3.	ಇಂದಿರಾನಗರ ಸಾರ್ವಜನಿಕ ಆಸ್ಪತ್ರೆ	337000.00
4.	ಸಾಂಕ್ರಾಮಿಕ ರೋಗಗಳ ಆಸ್ಪತ್ರೆ	500000.00
5.	ಕುಷ್ಠರೋಗ ಆಸ್ಪತ್ರೆ	465000.00
6.	ಘೋಷಾ ಆಸ್ಪತ್ರೆ	687000.00

ಈ) ಖಾಸಗಿ ಆಸ್ಪತ್ರೆಗಳು ವಿವಿಧ ಚಿಕಿತ್ಸೆಗಾಗಿ ರೋಗಿಗಳಿಗೆ ವಿಧಿಸುತ್ತಿರುವ ದರ ಕುರಿತಂತೆ ಸರ್ಕಾರಕ್ಕೆ ವರದಿ ಮಾಡುವ ಪರಿಪಾಠವಿಲ್ಲದ ಕಾರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) ಈ ಸರ್ಕಾರಿ ಆಸ್ಪತ್ರೆಗಳಲ್ಲಿ ಇ.ಸಿ.ಜಿ., ಕ್ಷ-ಕಿರಣ ತಂತ್ರಜ್ಞ, ಅಲ್ಟ್ರಾ ಸೌಂಡ್ ಮತ್ತು ಡಯಾಲಿಸಿಸ್ ಯಂತ್ರ ಇತ್ಯಾದಿ ಆಧುನಿಕ ಯಂತ್ರಗಳನ್ನು ಪೂರೈಸಿ ಸುಸಜ್ಜಿತಗೊಳಿಸಲಾಗಿದೆ.

ಬೆಂಗಳೂರು ನಗರದಲ್ಲಿ ಅಲ್ಪಸಂಖ್ಯಾತರಿಗೆ ಕೈಗೊಂಡಿರುವ ಯೋಜನೆಗಳು

903 (971) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಧಲ್ಲಿ ಅಲ್ಪಸಂಖ್ಯಾತರಿಗೆ ಯಾವ ಯವ ಯೋಜನೆಗಳನ್ನು ಕೈಗೊಳ್ಳಲಾಗಿದೆ ಹಾಗೂ ಅವರಿಗೆ ನೀಡಿರುವ ಸಾಲ ಸೌಲಭ್ಯಗಳು ಎಷ್ಟು (ವಿವರ ನೀಡುವುದು);

ಅ) ಸರ್ಕಾರ ಅಲ್ಪಸಂಖ್ಯಾತರ ಮಹಿಳೆಯರಿಗೆ ಯಾವ ಯೋಜನೆಗಳನ್ನು ಕೈಗೊಳ್ಳಲಾಗಿದೆ;

ಇ) ಹಾಗಿದ್ದಲ್ಲಿ, ಅಲ್ಪಸಂಖ್ಯಾತರ ಎಷ್ಟು ಮಹಿಳೆಯರಿಗೆ ಸಾಲ ಸೌಲಭ್ಯ ನೀಡಲಾಗಿದೆ;

ಈ) ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಸರ್ಕಾರ ನೀಡುತ್ತಿರುವ ಸಾಲದ ಮೊತ್ತ ಎಷ್ಟು (ವಿವರವಾದ ಮಾಹಿತಿ ನೀಡುವುದು)?

ಶ್ರೀ ಪ್ರೊ. ಡಾ. ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಬೆಂಗಳೂರು ನಗರದ ಫಲಾನುಭವಿಗಳಿಗೆ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ. ಆರ್ಥಿಕ ವರ್ಷದಲ್ಲಿ ಸಾಲ ಸೌಲಭ್ಯ ಒದಗಿಸಿದ ವಿವರ ಇಂತಿದೆ:–

(ರೂ. ಲಕ್ಷಗಳಲ್ಲಿ)

	ಯೋಜನೆಯ ಹೆಸರು	ಸಾಲದ ಮೊತ್ತ
1.	ಸ್ವಾವಲಂಬನ ಸಾಲದ ಯೋಜನೆ	23.31
2.	ಸಹಾಯಧನ ಯೋಜನೆ	6.45
3.	ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ	162.06
4.	ಶ್ರಮಶಕ್ತಿ ಯೋಜನೆ	46.68
5.	ಮೈಕ್ರೋಸಾಲದ ಯೋಜನೆ	20.42
6.	ಮೈಕ್ರೋ ಸಹಾಯಧನ ಯೋಜನೆ	10.40

ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ನೀಡಲಾಗುವ ಯೋಜನೆಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅಲ್ಪಸಂಖ್ಯಾತರ ಮಹಿಳೆಯರಿಗೆಂದು ಮೈಕ್ರೋಸಾಲದ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಅಲ್ಪಸಂಖ್ಯಾತರ ಇಲಾಖಾವತಿಯಿಂದ ಕೈಗೊಳ್ಳುವ ಯೋಜನೆಗಳು ಈ ಕೆಳಕಂಡಂತಿವೆ.

1) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು
2) ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ
3) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ
4) ಅಲ್ಪಸಂಖ್ಯಾತರಿಗಾಗಿ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು
5) ಅಲ್ಪಸಂಖ್ಯಾತರಿಗಾಗಿ ವೃತ್ತಿ ತರಬೇತಿ
6) ಅಲ್ಪಸಂಖ್ಯಾತರಿಗಾಗಿ ಕಾನೂನು ಪವೀಧರರಿಗೆ ಶಿಷ್ಯವೇತನ
7) ಅಲ್ಪಸಂಖ್ಯಾತರಿಗಾಗಿ ಅನಾಥಾಲಯಗಳು
8) ಅಲ್ಪಸಂಖ್ಯಾತರಿಗಾಗಿ ಐಟಿಐ/ಡಿಪ್ಲೋಮಾ ವಿದ್ಯಾರ್ಥಿಗಳಿಗೆ - ಶಿಷ್ಯವೇತನ
9) ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
10) ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ
11) ಮೆರಿಟ್-ಕಂ-ಮೀನ್ಸ್ ವಿದ್ಯಾರ್ಥಿವೇತನ

ಇ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ರಾಜ್ಯದ್ಯಾಂತ 5800 ಜನ ಮಹಿಳೆಯರಿಗೆ ರೂ.505.52 ಲಕ್ಷಗಳ ಸಾಲ ಹಾಗೂ ಸಹಾಯಧನ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇದರಲ್ಲಿ ಬೆಂಗಳೂರು ನಗರ ಜಿಲ್ಲೆಗೆ 416 ಜನ ಮಹಿಳೆಯರಿಗೆ ರೂ.30.82 ಲಕ್ಷಗಳ ಸಾಲ ಹಾಗೂ ಸಹಾಯಧನ ಕಲ್ಪಿಸಲಾಗಿದೆ.

ಈ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಸಾಲ ಕಲ್ಪಿಸುವ ಗರಿಷ್ಠ ಮೊತ್ತದ ವಿವರ ಇಂತಿದೆ:-

1. ಸ್ವಾವಲಂಬನ ಸಾಲದ ಯೋಜನೆಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಘಟಕ ವೆಚ್ಚ ರೂ.1.00 ಲಕ್ಷಗಳ ವರೆಗೆ ಸಾಲ ಪಡೆಯಬಹುದು ಇದರಲ್ಲಿ ನಿಗಮದಿಂದ ಶೇಕಡ 20 ರಷ್ಟು ಗರಿಷ್ಟ ರೂ.20,000/-ಗಳ ವರೆಗೆ ಸಾಲ.
2. ಅರಿವು ಯೋಜನೆಯಡಿಯಲ್ಲಿ ಕನಿಷ್ಠ ರೂ.5,000/- ರಿಂದ ಗರಿಷ್ಠ ರೂ.50,000/-ಗಳ ವರೆಗೆ ವಿದ್ಯಾಭ್ಯಾಸ ಸಾಲ.

3. ಶ್ರಮಶಕ್ತಿ ಯೋಜನೆಯಡಿಯಲ್ಲಿ ಗರಿಷ್ಠ ರೂ.25,000/-ಗಳ ವರೆಗೆ ಸಾಲ (ಇದರಲ್ಲಿ ಶೇಕಡ 25 ರಷ್ಟು ಸಹಾಯಧನ)
4. ಮೈಕ್ರೋಸಾಲ ಯೋಜನೆಯಡಿಯಲ್ಲಿ ಗರಿಷ್ಠ ರೂ.10,000/-ಗಳ ವರೆಗೆ ಸಾಲ (ರೂ.7,500/-ಗಳ ಸಾಲ ಮತ್ತು ರೂ.2,500/-ಗಳ ಸಹಾಯಧನ)

Annexure – 1

Fallowing are the schemes implemented from the Directorate of Minorities

State Sector

1) Construction of Shadimahal/ Community Hall
2) Construction of Hostel Buildings for Minorities
3) Moraji Desai Residential Schools
4) Hostel buildings to be Constructed by Minority Organizations.
5) Morarji Desai Residential Schools for Minorities
6) Skill Development Schemes for Minorities
7) Teaching and Learning Aids to Govt. Minorities Schools
8) Incentive for Minority Students
9) New Hostels for Minorities

District sector

10) Training for minorities, Stipend to Law Graduates
11) Hostels for minorities
12) Stipend ITI/Dip for minorities
13) Minority Hostel Run by Minority Organizations
14) Morarji Desai Residential Schools
15) Occupational Training for minorities
16) GIA Orphanages for minorities

Central Government Scheme

17) Merit-cum-means Scholarship
18) Pre-matric Scholarship
19) Post-matric Scholarship

ಬೆಂಗಳೂರು ನಗರದಲ್ಲಿರುವ ಆಸ್ಪತ್ರೆಗಳಿಗೆ ಮಂಜೂರಾಗಿರುವ ಹುದ್ದೆಗಳು

904 (972) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಆಸ್ಪತ್ರೆಗಳಿಗೆ ಮಂಜೂರಾಗಿರುವ ವೈದ್ಯರು, ಶುಶ್ರೂಷಕಿಯರು ಮತ್ತು ಇನ್ನಿತರೆ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಹುದ್ದೆಗಳಲ್ಲಿ ಭರ್ತಿಯಾಗಿರುವ ಖಾಲಿಯಾಗಿರುವ ಹುದ್ದೆಗಳು ಎಷ್ಟು (ಆಸ್ಪತ್ರೆವಾರು ಮಾಹಿತಿ ನೀಡುವುದು);

ಇ) ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬೆಂಗಳೂರು ನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟು 119 ವೈದ್ಯರು, 230 ಶುಶ್ರೂಷಕಿಯರು ಮತ್ತು 600 ಇನ್ನಿತರೆ ಹುದ್ದೆಗಳು ಮಂಜೂರಾಗಿವೆ.

ಆ) ಸದರಿ ಆಸ್ಪತ್ರೆಗಳಲ್ಲಿ 84 ವೈದ್ಯರು, 189 ಶುಶ್ರೂಷಕಿಯರು ಮತ್ತು 416 ಇನ್ನಿತರೆ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

35 ವೈದ್ಯರು, 41 ಶುಶ್ರೂಷಕಿಯರು ಮತ್ತು 184 ಇನ್ನಿತರೆ ಹುದ್ದೆಗಳು ಖಾಲಿ ಇವೆ. (ಆಸ್ಪತ್ರೆವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.)

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.